## ಹೊಸ ಸಂಪ್ರದಾಯ ಹುಟ್ಟು ಹಾಕಲಿ

ಕಾಲ ಬದಲಾಗಿದೆ. ನಾವೂ ಬದಲಾಗಬೇಕು. ಆದರೆ ಈ ಬದಲಾವಣೆಯನ್ನು ತಕ್ಷಣ ಸಮಾಜ ಒಪ್ಪುವುದಿಲ್ಲ. ಹಾಗಂತ ನಾವು ಬದಲಾಗದೇ ಇರಲು ಆಗುವುದಿಲ್ಲ. ನಾಗರಿಕತೆ ವಿಕಸನಗೊಂಡಂತೆ, ಮಹಿಳೆ ಬುದ್ಧಿವಂತಿಕೆಯಲ್ಲಾಗಲಿ, ಶಕ್ತಿ, ಸಾಹಸ, ನೈಪುಣ್ಯದಲ್ಲಾಗಲಿ ಯಾವುದರಲ್ಲೂ ಕಡಿಮೆ ಇಲ್ಲ ಎಂದು ರುಜುವಾತು ಆಗುತ್ತಿರುವುದನ್ನು ಗಮನಿಸುತ್ತಿದ್ದೇವೆ.

ಹೆತ್ತವರ ಪಾಲಿಗೆ ಈಗೀಗ ಮಗಳು, ಮಗ ಎನ್ನುವ ತಾರತಮ್ಯ ಮುಗಿಯುತ್ತ ಬಂದಿದೆ. ಗಂಡಾಗಲಿ ಅಥವಾ ಹೆಣ್ಣಾಗಲಿ ಎರಡೂ ಒಂದೇ ಎನ್ನುವ ವಿಶಾಲ ಭಾವನೆ ಮೂಡತೊಡಗಿದೆ. ಹೆತ್ತು ಸಲುಹಿದ ತಾಯಿ, ತಂದೆಯವರ ಬದುಕಿನ ಸಂಧ್ಯಾ ಸಮಯದಲ್ಲಿ ಮಕ್ಕಳು ಅವರನ್ನು ಜತನವಾಗಿ ನೋಡಿಕೊಳ್ಳುವುದು ಅವರ ಕರ್ತವ್ಯ ಹಾಗೂ ಜವಾಬ್ದಾರಿ ಕೂಡ ಆಗಿದೆ.

ಗಂಡು ಸಂತಾನ ಇಲ್ಲದ ಪೋಷಕರು ಕೇವಲ ಹೆಣ್ಣು ಸಂತಾನವಿದ್ದು, ಮಡಿದವರ ಅಂತಿಮ ಕ್ರಿಯಾಕರ್ಮಗಳನ್ನು ಇನ್ನೊಬ್ಬರ ಕಡೆಯಿಂದ ಮಾಡಿಸುವಾಗ ಆಗುವ ಇರುಸುಮುರುಸು, ಅವ್ಯಕ್ತ ಸಂಕಟ ಹೇಳಲಾಗದು.

ಹಿಂದಿನ ಕಾಲದವರು ಆಗಿನ ಕಾಲಘಟ್ಟಕ್ಕೆ ಅನುಗುಣವಾಗಿ ಮಾಡಿರುವಂತಹ ಕಟ್ಟುಪಾಡುಗಳು ನಾಗರಿಕತೆ ಬೆಳೆದಂತೆ ಸವೆದುಹೋಗುತ್ತಿವೆ. ಹೀಗಾಗಿ ಈಗೇನಿದ್ದರೂ ಸಮಯಕ್ಕೆ ಅನುಗುಣವಾಗಿ ಯಾರಿಗೂ ತೊಂದರೆ ಆಗದ ರೀತಿ ಹೊಸ ಸಂಪ್ರದಾಯ ಹುಟ್ಟುಹಾಕುವುದು ಅವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ಮನೆಯ ಹೆಣ್ಣುಮಕ್ಕಳು ಸಹ ಹಳೆಯ ಸಂಪ್ರದಾಯಕ್ಕೆ ವಿದಾಯ ಹೇಳಿ ತಮ್ಮ ಪೋಷಕರ ಅಂತ್ಯಕ್ರಿಯೆ ಕರ್ಮಾದಿಗಳನ್ನು ತಾವೇ ಮಾಡುವುದರ ಮೂಲಕ ಹೊಸ ಭಾಷ್ಯ ಬರೆಯಲು ಮುಂದಾಗಬೇಕು. ಅದು ನಿಧಾನವಾಗಿಯಾದರೂ ಮುಂದೆ ನಿರಾಳ ತಂದುಕೊಡುವುದರಲ್ಲಿ ಸಂಶಯವೇ ಇಲ್ಲ.

—ಅರವಿಂದ ಜಿ. ಜೋಷಿ, ಮೈಸೂರು

## ಶೋಷಣೆಯ ಶೂಲ...

ಗಂಡು ಹೆಣ್ಣು ಎನ್ನುವುದು ನೈಸರ್ಗಿಕ ಭಿನ್ನತೆಯಷ್ಟೆ. ಇದನ್ನೇ ಆಧಾರವಾಗಿಟ್ಟು ಭೇದಭಾವದ ದೃಷ್ಟಿಕೋನ ಹಿಂದಿನಿಂದಲೂ ಬಂದಿದೆ. ಹೆಣ್ಣು ನೈಸರ್ಗಿಕವಾಗಿ ಮೃದು ಸ್ವಭಾವದವಳು, ಭಾವನಾಜೀವಿಯಾದ ಮಾತ್ರಕ್ಕೆ ಅವಳನ್ನು ಸಂಪ್ರದಾಯದ ಹೆಸರಲ್ಲಿ ಶೋಷಿಸುತ್ತಿರುವುದು ನಡೆಯುತ್ತಲೇ ಇದೆ.

ಬಸವ ತತ್ವದಲ್ಲಿ ಗಂಡು ಹೆಣ್ಣಿನ ಭೇದವಿಲ್ಲ. ಬಸವಣ್ಣ ಹೆಣ್ಣಿಗೂ ಸಮಾನ ಭಾವ ತುಂಬಲು ನಿರಂತರವಾಗಿ ಪ್ರಯತ್ನಿಸಿದರು. ಕಷ್ಟಕ್ಕೆ ಸುಖಕ್ಕೆ ಹೆಣ್ಣು ಬೇಕು ಆದರೆ ಕೆಲವೊಂದು ಆಚರಣೆಗಳಿಂದ ಹೆಣ್ಣು ದೂರವಿರಬೇಕೆಂಬ ಕೆಟ್ಟ ಪದ್ಧತಿ ನಾವಾಗಿ ಮಾಡಿಕೊಂಡ ಕಂದಾಚಾರ. ವಿಧವೆಯಾದವರು ಮಂಗಳ ಕಾರ್ಯದಲ್ಲಿ ಪಾಲ್ಗೊಳ್ಳುವಂತಿಲ್ಲ, ಕೊಟ್ಟ ಹೆಣ್ಣು ಕುಲದ ಹೊರಗೆ, ಆಸ್ತಿಯಲ್ಲಿ ಹಕ್ಕಿಲ್ಲ... ಹೀಗೆ ಹಲವು ಹತ್ತು ರೀತಿ ರಿವಾಜುಗಳು ಅವಳನ್ನು ಶೋಷಣೆಯ ಶೂಲಕ್ಕೇರಿಸಿವೆ. ಅವಳ ವಿರುದ್ಧದ ಸಾಂಪ್ರದಾಯಿಕ ಕಟ್ಟುಪಾಡುಗಳು ಅವಳನ್ನು ದುರ್ಬಲಗೊಳಿಸಿವೆ. ಅದರಲ್ಲಿ ಹೆಣ್ಣು ಹೆತ್ತವರ ಅಂತ್ಯಸಂಸ್ಕಾರವನ್ನು ಮಾಡಬಾರದು ಎಂಬ ಕಟ್ಟಳೆಯಂತೂ ತುಂಬ ಅಸಹನೀಯವಾಗಿದೆ.

ಹೆಣ್ಣು ತನ್ನ ಹೆತ್ತವರಿಗೆ ಅಂತ್ಯಸಂಸ್ಕಾರದ ವಿಧಿ ವಿಧಾನಗಳನ್ನು ನೆರವೇರಿಸುವಂತಿಲ್ಲವೆಂಬುದಕ್ಕೆ ಯಾವುದೇ ಸೂಕ್ತ ಕಾರಣವಿಲ್ಲ. ಗತಿಸಿದ ವ್ಯಕ್ತಿಯ ಪ್ರೀತಿ ಪಾತ್ರರಾದ ಹೆಣ್ಣುಮಕ್ಕಳು ಮಾಡುವಂತಿಲ್ಲ ಎಂಬುದು ಅರ್ಥಹೀನವಾದುದು. ಹೆಣ್ಣುಮಕ್ಕಳು ಸಂಸ್ಕಾರಗೈದರೆ ಹೆತ್ತವರಿಗೆ ಆತ್ಮಶಾಂತಿ ದೊರಕುವುದಿಲ್ಲ. ಸದ್ಗತಿ ಸಿದ್ಧಿಸುವುದಿಲ್ಲವೆಂಬುದು ಕೂಡ ಅಪಹಾಸ್ಯವೇ. ಸಾವು ಬದುಕಿನ ಅನಿವಾರ್ಯ ಭಾಗವಾಗಿದ್ದು, ಸತ್ತ ವ್ಯಕ್ತಿ ಪುತ್ರನಿಂದ ಸ್ವರ್ಗ ಸೇರುತ್ತಾನೆ ಎಂಬ ಕಪೋಲಕಲ್ಪಿತ ತಿಳಿವಳಿಕೆ ದೂರವಾಗಿ ಹೆಣ್ಣಿಗೆ ಎಲ್ಲದರಲ್ಲೂ ಸಮಾನ ಅವಕಾಶ ನೀಡಬೇಕು.

—ಸೋಮ ಮಂಡಘಟ್ಟ, ಶಿವಮೊಗ್ಗ



## ಇದು ಹೆಣ್ಣಿನ ಹಕ್ಕು

ಆಧುನಿಕ ಯುಗದಲ್ಲಿ ಕೂಡ ಹೆಣ್ಣಿನ ಬದುಕೆಂದರೆ ಹೂವಿನ ಮಾಲೆಯಂತೆ ಸುಂದರವಾಗಿಲ್ಲ. ಎಷ್ಟೇ ಓದಿದರೂ ಎಂತಹುದೇ ಒಳ್ಳೆಯ ಕೆಲಸವಿದ್ದರು ಕೂಡ ಆ ಹೆಣ್ಣಿಗೆ ಮದುವೆಯಾಗಿ ಹೋದ ಮನೆಯವರ ಬೆಂಬಲ, ಪ್ರೀತಿ ಸಿಗದಿದ್ದರೆ ಎಷ್ಟೇ ಸವಲತ್ತಿದ್ದರೂ ಅದೆಲ್ಲ ನಗಣ್ಯ.

ಒಬ್ಬರೇ ಹೆಣ್ಣುಮಗಳಿದ್ದಾಗ ತಮ್ಮ ಮಾತಾಪಿತರ ಜವಾಬ್ದಾರಿಯನ್ನು ಹೊರುವುದು ಅವರ ಆದ್ಯ ಕರ್ತವ್ಯ. ಹಿಂದೆ ವೇದಗಳ ಕಾಲದಲ್ಲಿ ಗಾರ್ಗಿ, ಮೈತ್ರೇಯಿ ಎಂಬ ಹೆಣ್ಣುಮಕ್ಕಳು ಗಾಯತ್ರಿ ಜಪ ಮಾಡುತ್ತಿದ್ದರು, ಜನಿವಾರ ಧರಿಸಿದ್ದರು ಎಂಬುದರ ಉಲ್ಲೇಖವಿದೆ. ಹೀಗಿದ್ದಾಗ ಇಂದಿನ ಹೆಣ್ಣುಮಕ್ಕಳು ತಮ್ಮ ಪಾಲಕರ ಜವಾಬ್ದಾರಿಯನ್ನು ಹೊತ್ತು, ಕಾಲಾನಂತರ ಅವರ ಕ್ರಿಯಾಕರ್ಮಗಳನ್ನು ಮಾಡುವುದು ಅವರ ಹಕ್ಕು ಕೂಡ ಹೌದು. ಹೆತ್ತವರಿಗೆ ಸದ್ಗತಿ ಒದಗಿಸುವ ಪುಣ್ಯದ ಕಾರ್ಯ ಹೆಣ್ಣು ಮಗಳೇ ಮಾಡುತ್ತಾಳೆಂದರೆ ಶ್ಲಾಘನೀಯ.

—ರಂಜಿತಾ ಹೆಬ್ಬಾರ್, ಬೆಂಗಳೂರು

ಸಮಾಜದಲ್ಲಿ ‘ಹೆಣ್ಣು’ ಎಂಬ ಕಾರಣಕ್ಕೆ ಎದುರಾಗುವ ತರತಮಗಳು ಹಲವು. ಹೆತ್ತವರ ಅಂತ್ಯಸಂಸ್ಕಾರದ ವಿಷಯದಲ್ಲಿಯೂ ಈ ಪಕ್ಷಪಾತ ಮುಂದುವರೆಯುತ್ತದೆ. ‘ಹೆಣ್ಣುಮಕ್ಕಳು ಹೆತ್ತವರ ಅಂತ್ಯಸಂಸ್ಕಾರ ಮಾಡಬಹುದೇ?’ —ಈ ಪ್ರಶ್ನೆ ಸಮಾಜದಲ್ಲಿ ಆಗಾಗ ಚರ್ಚೆಗೆ ಈಡಾಗುತ್ತಲೇ ಇರುತ್ತದೆ. ತಮ್ಮ ತಂದೆ ತಾಯಿಯ ಜವಾಬ್ದಾರಿಯನ್ನು ಪ್ರೀತಿಯಿಂದಲೇ ಹೊತ್ತು ನಿಭಾಯಿಸಿದ್ದ ಹೆಣ್ಣುಮಕ್ಕಳಿಗೆ ಅವರ ಕ್ರಿಯಾಕರ್ಮಗಳನ್ನು ಮಾಡುವ ಹಕ್ಕು ಇಲ್ಲವೇ? ಈ ಬಗ್ಗೆ ನಿಮ್ಮ ಅನಿಸಿಕೆ, ಅನುಭವಗಳಿದ್ದರೆ ಹಂಚಿಕೊಳ್ಳಬಹುದು. ಬರಹ 150 ಪದಮಿತಿಯಲ್ಲಿರಲಿ. ಕೊನೆಯ ದಿನ ಆಗಸ್ಟ್ 17. ನುಡಿ ಅಥವಾ ಯುನಿಕೋಡ್‌ನಲ್ಲಿ ನಿಮ್ಮ ಲೇಖನವಿರಲಿ. editorsu@sudha.co.inಗೆ ಬರೆದು ಕಳುಹಿಸಿ.